ಅಧ್ಯಕ್ಷರು: ಅವರು ಆ ಜಿಲ್ಲೆಯವರಲ್ಲವೇ? ಅವರಿಗೂ ಮಾಹಿತಿ ಗೊತ್ತಿರುತ್ತದೆ ಅಲ್ಲವೇ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ತಾವು (ವಾಟಾಳ್ ನಾಗರಾಜ್) ಏನು ಸೂಚನೆಯನ್ನು ಕೊಡುತ್ತಿರೋ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಆ ಭಾಗದ ಸಚಿವನಾಗಿರುವುದರಿಂದ, ವಿಚಾರ ಗೊತ್ತಿರುವುದರಿಂದ ಆ ಬಗ್ಗೆ ಪ್ರಸ್ತಾಪಮಾಡಿದೆ.

ಅಧ್ಯಕ್ಷರು: ಆಯಿತು, ನಿಮಗೂ ಗೊತ್ತಿದೆ, ಅವರಿಗೂ ಗೊತ್ತಿದೆ, ಈಗ ಚರ್ಚೆಗೆ ಅವಕಾಶವಿಲ್ಲ.

ಶ್ರೀ ವಾಟಾಳ್ ನಾಗರಾಜ್: ಸರ್, ಈಗ ನಾನು ಮಾತನಾಡುವುದಕ್ಕೆ ಹೋದರೆ ತಾವು ಬಹಳ ಬೇಜಾರು ಮಾಡಿಕೊಳ್ಳುತ್ತೀರಿ, ನನಗೆ ನೋವಾಗಿದೆ, ಹೊರಗಡೆಗೆ ಹೋಗುತ್ತಿದ್ದೇನೆ, ಎಲ್ಲಾದರೂ ಉಂಟೇ? ಸತ್ತವರ ಬಗ್ಗೆ ಅನುಕಂಪವಿಲ್ಲ, ಯಾರೋ ಒಬ್ಬ ಅಮಾಯಕ ಸಬ್ ಇನ್ಸ್‌ಪೆಕ್ಟರ್ ಅನ್ನು ಅಮಾನತಿನಲ್ಲಿಡಲಾಗಿದೆ. ಅವರು ಜಿಲ್ಲಾ ಮಂತ್ರಿಗಳು, ಅವರಿಗೂ ಗಣಿಗೂ ಸಂಬಂಧವಿಲ್ಲ, ಅವರ ಬಗ್ಗೆ ನನಗೆ ಗೌರವವಿದೆ, ವಿಶ್ವಾಸವಿದೆ.

ಅಧ್ಯಕ್ಷರು : ಪರಿಹಾರ ಕೊಡುತ್ತಾರೆ, ತಮ್ಮ ಸ್ಥಾನಕ್ಕೆ ತೆರಳಿ, ತಾವು ತಮ್ಮ ಆಸನದಲ್ಲಿ ಕುಳಿತುಕೊಂಡರೆ ಉತ್ತರ ಸಿಗುತ್ತದೆ., ಸ್ವಾಮಿ.

ಇ) ವಿಷಯ: ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಅಲಾಳ ಗ್ರಾಮದ ದಲಿತ ರೈತನ ಅನುಮಾನಾಸ್ಪದ ಸಾವಿನ ಮತ್ತು ಆ ಪ್ರದೇಶದಲ್ಲಿ ನಿರಂತರವಾಗಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಎರಡು ತಿಂಗಳಿನಿಂದ ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಅಲಾಳ ಗ್ರಾಮದ ದಲಿತರ ಮೇಲೆ ದೌರ್ಜನ್ಯಗಳು ನಡೆದು ಬಂದ್, ಕೌಂಟರ್ ಬಂದ್‌ಗಳೆಲ್ಲಾ ಆಯಿತು. ಈ ಮಧ್ಯೆ 19ನೇ ತಾರೀಖು ಒಬ್ಬ ದಲಿತ ರೈತ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಅನುಮಾನಾಸ್ಪದ ಸಾವು ಎಂದು ಅಲ್ಲಿ ಪ್ರತಿಭಟನೆ ನಡೆಯುತ್ತಿದೆ. ಕಳೆದ 2 ತಿಂಗಳಿಂದ ಘರ್ಷಣೆ

ನಡೆಯುತ್ತಿದ್ದರೂ ಕೂಡ, ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರಾಗಲಿ, ಸರ್ಕಾರವಾಗಲಿ ಅಲ್ಲಿಗೆ ಹೋಗಿ ಏನು ಪರಿಸ್ಥಿತಿ ಇದೆ ಎಂದು ಪರಿಶೀಲನೆ ಮಾಡಿ, ಯಾವುದೇ ಕ್ರಮ ತೆಗೆದುಕೊಂಡಿಲ್ಲ, ರಕ್ಷಣೆಯನ್ನು ಕೊಟ್ಟಿಲ್ಲ. ಆದುದರಿಂದ, ಆ ಸುರಪುರ ತಾಲ್ಲೂಕಿನಲ್ಲಿ ದಲಿತರ ಮೇಲೇನು ದೌರ್ಜನ್ಯ ನಡೆಯುತ್ತಿದೆ, ಅದು ನಿಲ್ಲಬೇಕು, ಅವರ ಮೇಲೆ ಯಾರು ದೌರ್ಜನ್ಯ ಎಸಗಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಮತ್ತು ಸಂಬಂಧಪಟ್ಟ ಉಸ್ತುವಾರಿ ಸಚಿವರು ಅಲ್ಲಿಗೆ ಹೋಗಿ ಎರಡೂ ಗುಂಪುಗಳನ್ನು ಕೂರಿಸಿ ಅಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನ ಮಾಡಬೇಕು. ಪರಿಸ್ಥಿತಿ ಇದೆ ರೀತಿ ಮುಂದುವರೆದರೆ ತೀವ್ರ ರೀತಿಯಾದಂತಹ ಜಾತಿ ಗಲಭೆ, ಘರ್ಷಣೆಗಳುಂಟಾಗುತ್ತವೆ ಅದನ್ನು ತಡೆಯಬೇಕೆಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಹೊರಟ್ಟಿ (ಗೃಹ ಸಚಿವರ ಪರವಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 19.6.2007 ರಂದು ಅಲಾಳ ಗ್ರಾಮದ ನಿವಾಸಿ ಮಲ್ಲಪ್ಪ, (ಫಿಕ್ಸಾದಿ) ತಂದೆ ಪರಮಪ್ಪ ಬಡಗೇರಿ ಇವರು ಕೊಟ್ಟ ದೂರಿನ ಮೇರೆಗೆ ಕೆಂಭಾವಿ ಪೊಲೀಸ್ ಠಾಣೆ, ಗುನ್ನೆ ಸಂ: 106/06 ಕಲಂ 302, ಸಂಗಡ 149 ಐಪಿಸಿ ಮತ್ತು 3(2)(5) SC/ST P.A.Act ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಈ ಪ್ರಕರಣದ ತನಿಖೆಯನ್ನು ನಿಯಮವನ್ನು 7/1 SC/ST (Prevention of Atrocities) ಕಾಯ್ದೆ 1995ರ ಪ್ರಕಾರ ಡಿಎಸ್‌ಪಿ ದರ್ಜೆಯ ಸಕ್ಷಮರಾಗಿದ್ದು ಅವರಿಂದ ತನಿಖೆ ನಡೆಸಲಾಗುತ್ತಿದೆ. ಅಲಾಳ ಗ್ರಾಮದಲ್ಲಿ ಜನಸಂಪರ್ಕ ಸಭೆಯನ್ನು ಕೈಗೊಂಡು, ಹಿಂದುಳಿದ ವರ್ಗದವರಿಗೆ ನೀರಿನ ವ್ಯವಸ್ಥೆ, ದೇವಸ್ಥಾನದಲ್ಲಿ ದರ್ಶನದ ವ್ಯವಸ್ಥೆ ಮಾಡಲಾಗಿದೆ. ದಲಿತ ಮತ್ತು ಇತರ ಜನಾಂಗದವರು ಸೌಹಾರ್ದಯುತವಾಗಿರಲು ಸೂಕ್ತ ತಿಳುವಳಿಕೆ ನೀಡಲಾಗಿದೆ ಹಾಗೂ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗ್ರಾಮದಲ್ಲಿ ಪೋಲೀಸ್ ಬಂದೊಬಸ್ತ್ ಮಾಡಲಾಗಿದೆ. NP ಸುರಪುರ ತಾಲ್ಲೂಕಿನ ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಒಟ್ಟು 22 ದೌರ್ಜನ್ಯ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ ಒಟ್ಟು 5 ಪ್ರಕರಣಗಳಲ್ಲಿ "ಬಿ" ಅಂತಿಮ ವರದಿ ಸಲ್ಲಿಸಲಾಗಿರುತ್ತದೆ.

ಇನ್ನುಳಿದ 17 ಪ್ರಕರಣಗಳಲ್ಲಿ 8 ಜನರಿಗೆ ದಸ್ತಗಿರಿ ಮಾಡಲಾಗಿದೆ. NP ಈ ಕ್ಷೇತ್ರದಲ್ಲಿ ದಲಿತರ ರಕ್ಷಣೆಗಾಗಿ ಬೇಕಾದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ಅವರ ಮೇಲೆ ಯಾವುದೇ ರೀತಿಯ ದೌರ್ಜನ್ಯಗಳು ನಡೆಯದಂತೆ ಕಟ್ಟೆಚ್ಚರ ವಹಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಡಿ.ಸಿ. ಮತ್ತು ಎಸ್.ಪಿ.ಯವರಿಗೆ ಕ್ಷಣ ಕ್ಷಣಕ್ಕೆ ಅಲ್ಲಿನ ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಂಡು, ಅವರಿಗೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಬೇಕೆಂದು ನಿರ್ದೇಶನವನ್ನು ಸರ್ಕಾರ ಕೊಟ್ಟಿದೆ. ಅಲ್ಲಿ ಯಾವುದೇ ರೀತಿಯಲ್ಲಿ ಹೆಚ್ಚು ಕಡಿಮೆಯಾದರೆ ಕೂಡಲೇ ಕ್ರಮ ತೆಗೆದುಕೊಂಡು ಶಾಂತ ವಾತಾವರಣ ನಿರ್ಮಾಣ ಮಾಡಲು ಎಲ್ಲಾ ರೀತಿಯಿಂದಲೂ ಸರ್ಕಾರ ಕ್ರಮ ತೆಗೆದುಕೊಂಡಿದೆ.

12. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2007 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಸಭೆ ಪರಿಶೀಲನಾ ಸಮಿತಿಯು ಮಾರ್ಪಡಿಸಿದ ರೀತ್ಯಾ ವಿಧೇಯಕವನ್ನು ಪರಿಶೀಲಿಸಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕರಿಸಲ್ಪಟ್ಟ 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು.

ಶ್ರೀ ಬಿ.ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಹಿಂದೆ ವಿಧಾನಸಭೆಯಲ್ಲಿ ಪಾಸ್ ಆಗಿತ್ತು. ರಾಜ್ಯದಲ್ಲಿನ ಶಿಕ್ಷಕರ ವರ್ಗಾವಣೆ ಬಗ್ಗೆ ಒಂದು ನಿರ್ದಿಷ್ಟವಾದ ಸಲಹೆ ಸೂಚನೆಗಳನ್ನು ಕೊಡಲಾಗಿದೆ. ಹಿಂದೆ ನಿರ್ದಿಷ್ಟವಾದ ಕಾನೂನು ಇರಲಿಲ್ಲ. ಹಿಂದಿನ ಸರ್ಕಾರ, ತಾವೂ ಕೂಡ ಇದಕ್ಕೊಂದು ಕಾನೂನು